ಉದ್ವೇಗಕ್ಕೆ ಒಳಗಾಗುತ್ತೇವೆ. ನಾನೂ ಆ ತರಹ ವರ್ತಿಸಿದ್ದುಂಟು. ಎಲ್ಲರಿಗೂ ತಾಳ್ಮೆ ಪರೀಕ್ಷೆ ಮಾಡಿದರೆ ಎಲ್ಲೋ ಒಂದು ಕಡೆ ಸಹನೆ ತಪ್ಪುತ್ತದೆ. ನೀವು ಹೇಳುವುದು ಸರಿ ಇದೆ. ನ್ಯಾಯವಾಗಿ ಇಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ನಾನು ತಮ್ಮಲ್ಲಿ ಅತ್ಯಂತ ನಮ್ರತೆಯಿಂದ ಬೇಡಿಕೊಳ್ಳುತ್ತೇನೆ. ಈ ಪದ ಕಡತದಲ್ಲಿ ಉಳಿಯುವುದು ಬೇಡ. ಇದು ಚೆನ್ನಾಗಿ ಕಾಣುವುದಿಲ್ಲ. ನಿಮಗೆ ಶೋಭೆ ತರುವುದಿಲ್ಲ. Let that not remain on the record.

ಅಧ್ಯಕ್ಷರು:– ಆಯಿತು ತೆಗೆಸಿ ಹಾಕುತ್ತೇನೆ. ಶೋಭೆ ತರುವುದಿಲ್ಲ ನಿಜ. ಇಲ್ಲಿರುವಂತಹ ನಡವಳಿಕೆಗಳ ಬಗ್ಗೆಯೂ ಹೇಳಬೇಕು. ಆ ಪದವನ್ನು ತೆಗೆಸಿ ಹಾಕಿದ್ದೇನೆ.

ಪಿ.ಯು. ಕಾಲೇಜು

186(1255) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ)

ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:–

(ಅ) ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್, ಧಾರವಾಡ ಇಲ್ಲಿ ಪಿ.ಯು. ಕಾಲೇಜು ಪ್ರಾರಂಭಿಸಲು ಅಧ್ಯಯನ ಮಾಡಿ ವರದಿ ನಿಡಲು ಎಂ.ಐ. ಸವದತ್ತಿ ಅಧ್ಯಕ್ಷತೆಯಲ್ಲಿ ಸಮಿತಿ ನೇಮಿಸಿದ್ದು, ಸಮಿತಿಯಿಂದ ವರದಿ ಬಂದಿದೆಯೇ;

(ಆ) ಬಂದಿದ್ದರೆ, ವಿವರ ನೀಡುವುದು;

(ಇ) ಈ ವರದಿಯೂ ಪಿ.ಯ. ಕಾಲೇಜು ಪ್ರಾರಂಭಿಸಲು ಶಿಫಾರಸ್ಸು ಮಾಡಿದ್ದರೆ ಈ ವರದಿ ಪ್ರಕಾರ ಈ ವರ್ಷವೇ ಪಿ.ಯು. ಕಾಲೇಜು ಪ್ರಾರಂಭಿಸಲಾಗುವುದೇ?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

(ಅ) ಬಂದಿದೆ.

(ಆ) ಅನುಬಂಧದಲ್ಲಿ ವಿವರಿಸಿದೆ.

(ಇ) ಸದರಿ ವರದಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸಿಂಡಿಕೇಟ್ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

" ಈ ವಿಷಯದ ಪರಿಶೀಲನೆಯನ್ನು ಮೂಂದೂಡಲಾಗಿದೆ ಹಾಗೂ ವಿಶ್ವವಿದ್ಯಾಲಯದ ಪಬ್ಲಿಕ್ ಸ್ಕೂಲ್‌ನಲ್ಲಿ ಪಿ.ಯು.ಸಿ ವಿಭಾಗವನ್ನು ತೆರೆಯುವ ಬಗ್ಗೆ ಕಾನೂನು ಹಾಗೂ ಹಣಕಾಸಿನ ವಿಷಯದ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಕೋರಿ ಡಾ॥ ಕೆ. ಎಸ್. ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಸಮಿತಿಯನ್ನು ರಚಿಸಲಾಗಿದೆ ಹಾಗೂ ಸಿಂಡಿಕೇಟ್ ಸಭೆಯು ಕರ್ನಾಟಕ ಕಲಾ ಕಾಲೇಜಿನಲ್ಲಿ ಇನ್ನೊಂದು ಕಲಾ ವಿಭಾಗದ ಪಿ.ಯು.ಸಿ ಕೋರ್ಸ್‌ನ್ನು ತೆರೆಯುವ ಬಗ್ಗೆ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸುವಂತೆಯೂ ಸಹ ನಿರ್ಣಯಿಸಿದೆ. ಈ ಬಗೆಗಿನ ವರದಿಗಳನ್ನು ನಿರೀಕ್ಷಿಸಲಾಗಿದೆ"

ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್‌ನಲ್ಲಿ ಪಿ.ಯು.ಸಿ ಕೋಸ್‌ನ್ನು ಪ್ರಾರಂಭಿಸುವ ಸಂಬಂಧ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಪ್ರೊ: ಎಂ.ಐ.. ಸವದತ್ತಿ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ದಿ: 23-06-2007 ರಂದು ವಿಶ್ವವಿದ್ಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ವರದಿಯ ಸಾರಾಂಶ ಈ ಕೆಳಗಿನಂತಿರುತ್ತದೆ.

ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್‌ನಲ್ಲಿ 5ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಮತ್ತು 8 ರಿಂದ 10ನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಒಂದು ವಿಭಾಗವನ್ನು ನಡೆಸಲಾಗುತ್ತಿದೆ. ಒಟ್ಟು 500 ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುತ್ತಾರೆ. ಕಳೆದ ಮೂರು ವರ್ಷಗಳಿಂದ ಎಸ್.ಎಸ್. ಎಲ್.ಸಿ. ಫಲಿತಾಂಶವು ಶೇ. 56 ರಷ್ಟಿರುತ್ತದೆ. ಒಟ್ಟು 20 ಮಂದಿ ಬೋಧಕರು (ಖಾಯಂ ಮತ್ತು ತಾತ್ಕಾಲಿಕ) ಇದ್ದು ಈ ಎಲ್ಲಾ ವಿಭಾಗಗಳ ಬೋಧನಾ ವಿಭಾಗಕ್ಕೆ ಸಾಕಷ್ಟು ಬೋಧಕರುಗಳು ಇರುವುದಿಲ್ಲ. ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್‌ನಲ್ಲಿ ವಿದ್ಯಾರ್ಥಿನಿಲಯವಿದ್ದು, 167 ವಿದ್ಯಾರ್ಥಿಗಳಿಗೆ ವಾಸ್ತವ್ಯ ಕಲ್ಪಿಸಿಕೊಡಬಹುದಾಗಿದೆ. ಶಾಲೆಯಲ್ಲಿ ವಿದ್ಯಾರ್ಥಿನಿಲಯ ಇರುವುದರಿಂದ ಮತ್ತು ಬೇರೆ ಶಾಲೆಗಳಿಗೆ ಹೋಲಿಸಿದ್ದಲ್ಲಿ ಉತ್ತಮ ಫಲಿತಾಂಶ ಬರುತ್ತಿರುವುದರಿಂದ ಈ ಶಾಲೆಗೆ ಬಡ ಹಾಗೂ ಆರ್ಥಿಕವಾಗಿ ಹಿಂದುಳಿದ ಮತ್ತು ಶೈಕ್ಷಣಿಕವಾಗಿಯೂ ಹಿಂದುಳಿದ ವಿದ್ಯಾರ್ಥಿಗಳು ಶಾಲೆಯಲ್ಲಿ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯಲು ಹೆಚ್ಚಾಗಿ ಬರುತ್ತಿದ್ದಾರೆ. ಶಾಲಾ ಕಟ್ಟಡ ಮತ್ತು ವಸತಿ ನಿಲಯದ ಕಟ್ಟಡವನ್ನು ಸಖಯಾಗಿ ನೋಡಿಕೊಳ್ಳುತ್ತಿಲ್ಲ. ಗ್ರಂಥಾಲಯ ಮತ್ತು ಪ್ರಯೋಗಾಲಯಗಳು ತುಂಬಾ ಶೋಚನೀಯ ಸ್ಥಿತಿಯಲ್ಲಿದೆ. ವಿದ್ಯಾರ್ಥಿನಿಲಯ, ಕ್ರೀಡಾಂಗಣ ಮತ್ತು ತೋಟವನ್ನು

ಉತ್ತಮವಾಗಿ ನಿರ್ವಹಿಸುವ ಅವಶ್ಯಕತೆ ಇರುತ್ತದೆ. ಇದರಿಂದ ಕಟ್ಟಡದ ಪರಿಸ್ಥಿತಿ ಉತ್ತಮಗೊಳ್ಳುವುದಲ್ಲದೇ ಒಳ್ಳೆಯ ಶೈಕ್ಷಣಿಕ ವಾತಾವರಣವನ್ನು ಕಲ್ಪಿಸುವಲ್ಲಿ ಸಹಕಾರಿಯಾಗುತ್ತದೆ.

ಈಗಿರುವ ಬೋಧಕರಲ್ಲಿ 12 ಮಂದಿ ಪಿ.ಯು.ಸಿ. ಕೋರ್ಸ್ ಬೋಧಿಸಲು ಅರ್ಹರಾಗಿರುತ್ತಾರೆ. ಇವರುಗಳು ತಮ್ಮ ಈಗಿರುವ ಹೆಚ್ಚಿನ ಕಾರ್ಯ ಒತ್ತಡದ ನಡುವೆಯೂ ಪಿ.ಯ.ಸಿ. ತರಗತಿಗಳಿಗೆ ಬೋಧಿಸಲು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ. ಈಗಿರುವ ಬೋಧಕರಲ್ಲಿ ರಾಜ್ಯಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ, ಶಿಕ್ಷಣ, ಕನ್ನಡ ಮತ್ತು ಹಿಂದಿಯನ್ನು ಬೋಧಿಸಲು ಅರ್ಹತೆಯನ್ನು ಹೊಂದಿದ್ದರೂ ಪಿ.ಯು.ಸಿ ಮಟ್ಟದಲ್ಲಿ ಬೋಧಿಸಲು ಅನುಭವವನ್ನು ಹೊಂದಿರುವುದಿಲ್ಲ.

ಸಮಿತಿಯ ಶಿಫಾರಸ್ಸು:–

ಮೇಲ್ಕಂಡ ಸನ್ನಿವೇಶದ ಹಿನ್ನೆಲೆಯಲ್ಲಿ, ಸಮಿತಿಯು ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್‌ನಲ್ಲಿ ಪಿ.ಯು.ಸಿ (ಕಲೆ) ಕೋರ್ಸ್‌ನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಪ್ರಾರಂಭಿಸಲು ಶಿಫಾರಸ್ಸನ್ನು ಮಾಡಿರುತ್ತದೆ:–

(ಅ) ಶಾಲೆಯ ಶಿಕ್ಷಕರು ತಮ್ಮ ಈಗಿರುವ ಕಾರ್ಯ ಒತ್ತಡದ ಜೊತೆಗೆ ಹೆಚ್ಚುವರಿಯಾಗಿ ಪಿ.ಯು.ಸಿ. ತರಗತಿಗಳನ್ನು ಬೋಧಿಸಲು ಹಾಗೂ ಶಾಲಾ ಕಟ್ಟಡವನ್ನು ಸುಸಜ್ಜಿತವಾಗಿ ಮತ್ತು ಆಕರ್ಷಣೀಯವಾಗಿ ಇಡಬೇಕು;

(ಆ) ಗ್ರಂಥಾಲಯ ಮತ್ತು ಪ್ರಯೋಗಾಲಯಗಳನ್ನು ಸ್ವಚ್ಛಗೊಳಿಸುವುದಲ್ಲದೇ ಅವುಗಳನ್ನು ಪೂರ್ಣವಾಗಿ ಬಳಸದಂತೆ ಮಾಡಬೇಕು.

(ಇ) ಶಾಲೆಯ ಆವರಣದಲ್ಲಿ ತುಂಬಿಸುವ ಹಳೆಯ ಮತ್ತು ಕಿತ್ತುಹೋದ ಪೀಠೋಪಕರಣಗಳನ್ನು ಕೂಡಲೆ ತೆಗೆಸುವುದು ಮತ್ತು ಆ ಆವರಣವನ್ನು ಸ್ವಚ್ಛಗೊಳಿಸುವುದು;

(ಈ) ಪ್ರೌಢಶಾಲೆ ಮತ್ತು ಪಿ.ಯು.ಸಿ. ದರ್ಜೆಯ ಪುಸ್ತಕಗಳನ್ನು ಹೆಚ್ಚುಸುವುದರ ಮೂಲಕ ಈಗಿರುವ ಗ್ರಂಥಾಲಯವನ್ನು ಬಲಗೊಳಿಸಬೇಕು;

(ಉ) ಈಗ ಶಾಲಾ ಬೋಧನೆಯ ಜೊತೆಗೆ ಹೆಚ್ಚುವರಿಯಾಗಿ ಪಿ.ಯು.ಸಿ ಕೋರ್ಸಿಗೆ ಬೋಧಿಸಲು ಇಚ್ಛೆ ವ್ಯಕ್ತಪಡಿಸಿರುವ ಸಿಬ್ಬಂದಿಯ ಜೊತೆಗೆ ಕೆಲವು

ಉಪನ್ಯಾಸಕರನ್ನು ಒಂದು ಅಥವಾ ಎರಡು ವಿಷಯಗಳಿಗೆ ತಾತ್ಕಾಲಿಕವಾಗಿ (ಇಂಗ್ಲೀಷ್, ಅರ್ಥಶಾಸ್ತ್ರ) ನೇಮಿಸಿಕೊಳ್ಳುವುದು ಶಾಲೆಯಲ್ಲಿರುವ ಅರ್ಹ ಅಧ್ಯಾಪಕರನ್ನು ಮತ್ತು ಅವರ ಹಿನ್ನೆಲೆಯನ್ನು ನೋಡಿಕೊಂಡು ಮೊದಲ ವರ್ಷದಲ್ಲಿ ಕಡಿಮೆ ಐಚ್ಛಿಕ ವಿಷಯಗಳನ್ನು ಪ್ರಾರಂಭಿಸಬಹುದಾಗಿತ್ತದೆ.

(ಊ) ಕಾಲೇಜಿನಲ್ಲಿ ಉತ್ತಮ ಸೌಲಭ್ಯ ಮತ್ತು ಗುಣ ಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಒಂದು ಚಿಕ್ಕ ಶೈಕ್ಷಣಿಕ ಸಮಿತಿಯನ್ನು ರಚಿಸುವುದಲ್ಲದೇ ಮತ್ತು ಈಗಿರುವ ಶಾಲಾ ಸಮಿತಿಯ ಅಧ್ಯಕ್ಷರ ಉಸ್ತುವಾರಿಯಲ್ಲಿ ಸಮಿತಿಯು ಆಗಿಂದಾಗ್ಗೆ ಕಾಲೇಜಿಗೆ ಭೇಟಿ ನೀಡಿ, ಸೌಕರ್ಯಗಳು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಗುಣಮಟ್ಟ ಉತ್ತಮವಾಗಿರುವ ಬಗ್ಗೆ ಪರಿಶೀಲಿಸುವುದು. ಈ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸದೆ ಶಾಲೆಯು ಉತ್ತಮ ಶಿಕ್ಷಣವನ್ನು ನೀಡಲು ಸಾಧ್ಯವಿಲ್ಲ.

(ಋ) ಪಿ.ಯು.ಸಿ. ಕಲಾ ಕೋರ್ಸ್‌ನ್ನು ಪ್ರಾರಂಭಿಸಲು ವಿಶ್ವವಿದ್ಯಾಲಯವು ಸೂಕ್ತ ಹಣಕಾಸು ಸೌಲಭ್ಯವನ್ನು ಕಲ್ಪಿಸುವುದರ ಜೊತೆಗೆ ಇತರೆ ಕೆಲಸ–ಕಾರ್ಯಗಳಿಗೆ ಬೇಕಾಗಿರುವ ಹಣ ಮತ್ತು ಎಷ್ಟು ಶುಲ್ಕವನ್ನು ನಿಗದಿಪಡಿಸಬೇಕು ಎಂಬ ಬಗ್ಗೆ ಪರಿಶೀಲಿಸುವುದು.

ಶ್ರೀ ಎಸ್.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ, ಬಹುಶಃ ತಾವು ನಮ್ಮನ್ನು ಅಕೆಡಮಿಕ್ ಕೌನ್ಸಿಲ್‌ಗೆ ಹಾಕಿದ ಮೇಲೆ ನನ್ನನ್ನು ಛೇರ್ಮನ್ ಮಾಡಿದರು. ಮಾನ್ಯ ಹೊರಟ್ಟಿಯವರೂ ಕೂಡ ಅದರ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. A.K. Girls High school ಎಂದು Government High school ಇತ್ತು. ಇಡೀ ಬಾಂಬೆ–ಕರ್ನಾಟಕಕ್ಕೆ ಮತ್ತು ಉತ್ತರ ಕರ್ನಾಟಕಕ್ಕೆ ಇದು ಒಂದೇ ಹೈಸ್ಕೂಲ್ ಇದ್ದಿದ್ದು. ಅದನ್ನು ಯೂನಿವರ್ಸಿಟಿಗೆ ತೆಗೆದುಕೊಂಡರು. ಯೂನಿವರ್ಸಿಟಿಯವರು ಅದನ್ನು ನಿರ್ಲಕ್ಷ್ಯ ಮಾಡಿ ಬಿಟ್ಟಿದ್ದಾರೆ. ನಾನು ಛೇರ್ಮನ್ ಆಗಿ ಹೋದ ಮೇಲೆ ಅಕೆಡಮಿಕ್ ಕೌನ್ಸಿಲ್‌ನವರು PUC College ಪ್ರಾರಂಭ ಮಾಡಬೇಕೆಂದು ನಿರ್ಣಯ ಮಾಡಿದ್ದಾರೆ. ಮಾನ್ಯ ಸವದತ್ತಿಯವರ ಅಧ್ಯಕ್ಷತೆಯಲ್ಲಿ ಇಲ್ಲಿ ಒಂದು ಕಮಿಟಿ ಮಾಡಿದ್ದರು. ಅದರ ವರದಿ ಕೂಡ ಬಂದಿದೆ. ಅಲ್ಲಿ ಈಗಾಗಲೇ 12 ಜನ ಗೆಸ್ಟ್ ಲೆಕ್ಚರರ್ಸ್ ಹಾಗೂ ರೆಗ್ಯುಲರ್ ಲೆಕ್ಚರರ್ಸ್ ಇದ್ದಾರೆ. ಪಿಯುಸಿಗೆ ಹುಡುಗರಿಗೆ ಜಾಗ ಸಿಗುತ್ತಿಲ್ಲ. ಅಲ್ಲಿ ಎಲ್ಲ infrastructure facilities ಇದೆ. ದಯವಿಟ್ಟು ಇದೇ ವರ್ಷದಿಂದ ಅಲ್ಲಿ ಜೂನಿಯರ್ ಕಾಲೇಜು ಪ್ರಾರಂಭ ಮಾಡಬೇಕು. ಇದು ಆಗದೇ

ಇದ್ದರೆ ಯೂನಿವರ್ಸಿಟಿಯಿಂದ Governmentಗೆ ತೆಗೆದುಕೊಳ್ಳಬೇಕು. ಯೂನಿವರ್ಸಿಟಿಯವರು ಕೆಸಿಟ ಕಾಲೇಜನ್ನು ಕಟ್ಟಿಸಿದ್ದಾರೆ. ಅದೂ ಕೂಡ ಹಿಂದಿನ ಪರಿಸ್ಥಿತಿಯಲ್ಲಿ ಉಳಿದಿಲ್ಲ. ಅವರು ನಡೆಸುತ್ತಿದ್ದರೆ ನಡೆಸಲಿ. ಇಲ್ಲದಿದ್ದರೆ ತಾವು ದಯವಿಟ್ಟು ಸರ್ಕಾರದ ಅಧೀನಕ್ಕೆ ತೆಗೆದುಕೊಳ್ಳಬೇಕು. ಇಲ್ಲಾ, ಈ ವರ್ಷ ಕಾಲೇಜು ಪ್ರಾರಂಭ ಮಾಡುತ್ತಾರೆ ಇಲ್ಲವೆಂದು ಹೇಳಬೇಕು. ಈಗಾಗಲೇ ಒಂದು ವರದಿ ಕೊಟ್ಟಿದ್ದಾರೆ. ಸುಮ್ಮನೆ ಒಂದು ಕಮಿಟಿ ಮಾಡಿದ್ದಾರೆ.

ಶ್ರೀ ಬಿ.ಎಸ್. ಹೊರಟ್ಟಿ:– ಮಾನ್ಯ ಅಧ್ಯಕ್ಷರೆ, ನಾನು ಅದರ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಯೂನಿವರ್ಸಿಟಿ ಫಂಡ್‌ನಲ್ಲಿ ಅಲ್ಲಿ ದುಡ್ಡು ಕೊಡಬೇಕು. ಯೂನಿವರ್ಸಿಟಿಯವರು ದುಡ್ಡು ಕೊಟ್ಟರೆ ಕಾಲೇಜು ತೆಗೆಯುವುದಕ್ಕೆ ಏನೂ ಅಭ್ಯಂತರವಿಲ್ಲ. ಯೂನಿವರ್ಸಿಟಿಯವರು ಒಪ್ಪಿದರೆ ಅದನ್ನು ಮಾಡಬಹುದು. ಅದು ಸರ್ಕಾರಕ್ಕೆ ಬರುವುದಿಲ್ಲ. ಯೂನಿವರ್ಸಿಟಿಯವರು ಒಪ್ಪಿಕೊಂಡರೆ ಸಿಂಡಿಕೇಟ್‌ನಲ್ಲಿ ಪಾಸ್ ಮಾಡಿ ಮಾಡಬಹುದು.

ಶ್ರೀ ಎಸ್.ಎಸ್.ಪಾಟೀಲ್:– ಮಾನ್ಯ ಹೊರಟ್ಟಿ ಸಾಹೇಬರು ಹೇಳಿದ ಹಾಗೆ ಅವರ ಕಡೆಯಿಂದ ಅದು ಆಗುವುದಿಲ್ಲ. ಗೌರ್ನಮೆಂಟ್ ಕಾಲೇಜು ಅದು ಮತ್ತು ಹೈಸ್ಕೂಲ್ ಅದು. ಸರ್ಕಾರಕ್ಕೆ ತೆಗೆದುಕೊಂಡು ಬಿಡಿ. ಮಕ್ಕಳಿಗಾದರೂ ಅನುಕೂಲವಾಗುತ್ತದೆ. ತಾವೂ ನಡೆಸುವುದಿಲ್ಲ, ಬೇರೆಯವರಿಗೂ ನಡೆಸುವುದಕ್ಕೆ ಬಿಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಾವು ಸುಮ್ಮನೆ ಕುಳಿತು ಕೇಳುತ್ತಿದ್ದೇವೆ. ಸಂಬಂಧಪಟ್ಟ ಸಚಿವರು ಸುಮ್ಮನೆ ಕುಳಿತಿದ್ದಾರೆ. ಇನ್ನೊಬ್ಬರು ಉತ್ತರ ಹೇಳುತ್ತಿದ್ದಾರೆ. ಇದನ್ನು ಮಾತ್ರ ನೀವು ಸಹಿಸಿಕೊಳ್ಳುತ್ತೀರಾ?

ಅಧ್ಯಕ್ಷರು:– He has to reply. ಅವರು ಕೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್:– ಅವರು ಅದರ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಉತ್ತರ ಗೊತ್ತಿದೆ, ಹೇಳುತ್ತಾರೆ. ಅಲ್ಲಿ Business Advisory Committee ಯಲ್ಲಿ ಮಾತನಾಡಿಕೊಂಡು ಬಂದಿದ್ದೇವೆ. ಅದರಂತೆ ಎಲ್ಲರೂ ನಡೆದುಕೊಳ್ಳಬೇಕು. ಪ್ರಶ್ನೋತ್ತರ ವೇಳೆಯಲ್ಲಿ ನಮಗೆ ಏನೇ ಮಾಹಿತಿ ಇದ್ದರೂ ನಿಮ್ಮ ಒಪ್ಪಿಗೆ ತೆಗೆದುಕೊಂಡು ಎದ್ದು ನಿಲ್ಲಬೇಕು. ಈಗ ಇದಕ್ಕೆ ಆಕ್ಷೇಪಣೆ ಮಾಡುತ್ತೀರಿ, ಉಳಿದ ನಡವಳಿಕೆಗಳಿಗೆ ಏಕೆ ಆಕ್ಷೇಪಣೆ ಮಾಡುವುದಿಲ್ಲ?

ಶ್ರೀ ಜೆ.ಸಿ. ಮಾಧುಸ್ವಾಮಿ: – ಸಂಬಂಧಪಟ್ಟ ಸಚಿವರು ಹೇಳದೇ ಬೇರೆಯವರು ಹೇಳಬಹುದಾ? when he is in the House. ಅವರು ಹೇಳಿದ ಮೇಲೆ ನೀವು ಹೇಳಿದರೆ ಆಗುವುದಿಲ್ಲವಾ?

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಒದಗಿಸಿದ್ದೆ. ಅವರು ಉಪ ಪ್ರಶ್ನೆ ಕೇಳುವಾಗ ಸ್ವಾಭಾವಿಕವಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಅದಕ್ಕೆ ಉತ್ತರ ಹೇಳಿದರು. ಕಾರಣವೇನೆಂದರೆ, ಅದನ್ನು ಮಾನ್ಯ ಗೌರವಾನ್ವಿತ ಸದಸ್ಯರು ಗಮನಿಸಬೇಕು. ಪಿಯುಸಿ ಕಾಲೇಜು ಉನ್ನತ ಶಿಕ್ಷಣಕ್ಕೆ ಬರುವುದಿಲ್ಲ. ಪಿಯು ಕಾಲೇಜು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಬರುತ್ತದೆ. ಇದು ಒಂದು peculiar case. ಹಿಂದೆ ಇದು Government High School ಇತ್ತು. ಯಾವುದೋ ಕಾರಣಕ್ಕೆ ಅದನ್ನು ಯೂನಿವರ್ಸಿಟಿಗೆ ವಹಿಸಿ ಕೊಟ್ಟರು. ಯೂನಿವರ್ಸಿಟಿಯವರು ಹೈಸ್ಕೂಲ್ ಚೆನ್ನಾಗಿ ನಡೆಸುತ್ತಿದ್ದಾರೆ. ಅಲ್ಲಿ ಪಿಯು ಕಾಲೇಜು ಮಾಡಿ ಎಂದು ಹೇಳಿ ಪ್ರಪೋಸಲ್ ಬಂದಿತು. ಯೂನಿವರ್ಸಿಟಿಯವರು ನಾವು ಹೇಗೆ ಪಿ.ಯು. ಕಾಲೇಜು ಮಾಡುವುದು ಎಂದು ಹೇಳಿದರು. ಆದರೂ ಮಾನ್ಯ ಸವದತ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ನೇಮಕ ಮಾಡಿದರು. ಸವದತ್ತಿ ಕಮಿಟಿಯವರು ವರದಿ ಕೊಟ್ಟಿದ್ದಾರೆ. ಆ ವರದಿ ಅವರಿಗೆ ಕೊಟ್ಟಿದ್ದೇವೆ. ಮಾನ್ಯ ಎಸ್.ಎಸ್. ಪಾಟೀಲ್ ರವರ ಆಸೆ ಏನೆಂದರೆ, ಪಿಯು ಕಾಲೇಜಿಗೆ ತುಂಬ ಡಿಮಾಂಡ್ ಇರುವ ಕಾರಣ ಪಿಯು ಕಾಲೇಜನ್ನು ಯೂನಿವರ್ಸಿಟಿಯವರು ಮಾಡಲಿ. ಅವರು ಮಾಡುವುದಿಲ್ಲ ಎನ್ನುವುದಾದರೆ, ಸರ್ಕಾರದವರು ವಹಿಸಿಕೊಂಡು ನೀವು ಮಾಡಿ ಎಂದು ಹೇಳಿದರು. ಸರ್ಕಾರ ವಹಿಸಿಕೊಂಡು ಮಾಡುವುದಾದರೆ ಮಾನ್ಯ ಹೊರಟ್ಟಿಯವರ ಇಲಾಖೆಯೇ ಮಾಡಬೇಕಾಗುತ್ತದೆ. ನಾನು ಉನ್ನತ ಶಿಕ್ಷಣ ಇಲಾಖೆಯಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಹಾಗಾಗಿ ಈ ಪ್ರಶ್ನೆಯನ್ನು ನಾವು ಎರಡೂ ಇಲಾಖೆಯವರು ಸೇರಿ ನೋಡಬೇಕು. ಯೂನಿವರ್ಸಿಟಿ ಒಂದು ಅಟಾನಮಸ್ ಬಾಡಿ. ಯೂನಿವರ್ಸಿಟಿಯಲ್ಲಿರುವ ಯಾವುದಾದರೂ ಒಂದು ಇಲಾಖೆಯನ್ನು ಅಥವಾ ಆಸ್ತಿಯನ್ನು ಇನ್ನೊಂದು ಇಲಾಖೆಗೆ ಕೊಡುವುದಾದರೆ ಯೂನಿವರ್ಸಿಟಿಯವರು ರೆಸಲ್ಯೂಷನ್ ಪಾಸ್ ಮಾಡಬೇಕಾಗುತ್ತದೆ. ಅದನ್ನು ಅವರು ವ್ಯಕ್ತ ಮಾಡಿದ್ದಾರೆ. ಮಾನ್ಯ ಗೌರವಾನ್ವಿತ ಸದಸ್ಯರ ಅಭಿಪ್ರಾಯ ನನಗೆ ಗೊತ್ತಾಗಿದೆ, ಅಲ್ಲಿರತಕ್ಕಂತಹ ಮಕ್ಕಳಿಗೆ ಪಿ.ಯು. ಕಾಲೇಜು

ಸಿಗಬೇಕೆನ್ನತಕ್ಕಂಥ ಆಸೆ ಇದೆ. ಆದರೆ ಈಗ ಅಲ್ಲಿರುವ ಹಾಗೆ ಯೂನಿವರ್ಸಿಟಿಯವರು ರೆಸಲ್ಯೂಷನ್ ಮಾಡಿ, ಏನು ತೀರ್ಮಾನ ಮಾಡುತ್ತಾರೆ ಅದರಂತೆ ನಾವು ಮಾಡುತ್ತೇವೆ. ಆದಷ್ಟು ಬೇಗ ನಾವು ಅದನ್ನು ಮಾಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇನ್ನೊಂದು ಪ್ರಶ್ನೆ ಇದೆ. ನಿಮ್ಮದು ಒಂದು ಮಾತು ನಾನು ಒಪ್ಪುವುದಿಲ್ಲ. ಯೂನಿವರ್ಸಿಟಿಯವರು ಸರಿಯಾಗಿ ನಡೆಸುತ್ತಿದ್ದಾರೆ ಎಂದು ಹೇಳುತ್ತೀರಿ. ಅವರು ಸರಿಯಾಗಿ ನಡೆಸುತ್ತಿಲ್ಲ. ಇಬ್ಬರೂ ಸೇರಿ ಅಲ್ಲಿಗೆ ಭೇಟಿ ಕೊಟ್ಟು ನೋಡಿ. ಯೂನಿವರ್ಸಿಟಿಯವರು ನಡೆಸುತ್ತಿಲ್ಲ. ಕಾಲೇಜು ಮುಚ್ಚುವುದಕ್ಕೆ ಪ್ರಾರಂಭ ಮಾಡಿದ್ದಾರೆ. ದಯವಿಟ್ಟು ನೀವು ಅದನ್ನು ಸರ್ಕಾರಕ್ಕೆ ಕೊಟ್ಟು ಬಿಡಿ. ಅದು ಸರ್ಕಾರಿ ಹೈಸ್ಕೂಲ್. ಹುಡುಗರಿಗೆ ಅಲ್ಲಿ ಪಿ.ಯು.ಸಿ.ಗೆ ಸೀಟು ಸಿಗದೇ ಅಲೆದಾಡುತ್ತಿದ್ದಾರೆ. ಈಗಾಗಲೇ ಅಲ್ಲಿ 12 ಜನ ಲೆಕ್ಚರರ್ಸ್ ಇದ್ದಾರೆ. ಏನೂ ಖರ್ಚು ಬರುವುದಿಲ್ಲ. ವರದಿಯನ್ನು ಕೊಟ್ಟಿದ್ದೇವೆ. ಶಾಲೆ ನಡೆಸಬಹುದು ಎಂದು ಸವದತ್ತಿ ಕಮಿಟಿಯವರು ವರದಿ ಕೊಟ್ಟಿದ್ದಾರೆ. ಸುಮ್ಮನೆ ಮುಂದಕ್ಕೆ ಹಾಕುತ್ತಿದ್ದಾರೆ. ಯೂನಿವರ್ಸಿಟಿಗೆ ಏನೂ ಖರ್ಚು ಬರುವುದಿಲ್ಲ. ಒಂದು 10–20 ಲಕ್ಷ ರೂಪಾಯಿಗಳನ್ನು ಕೊಡಿ, ದಯವಿಟ್ಟು ಇದೇ ವರ್ಷದಿಂದ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಹೇಳಿಬಿಡಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಮಾನ್ಯ ಅಧ್ಯಕ್ಷರೆ, ಈ ಸಂಸ್ಥೆಯನ್ನು ಸರ್ಕಾರಕ್ಕೆ ವಹಿಸಿಕೊಳ್ಳುವುದಕ್ಕೆ ಯೂನಿವರ್ಸಿಟಿಯಲ್ಲಿ ಇಟ್ಟು ರೆಸಲ್ಯೂಷನ್ ಪಾಸ್ ಮಾಡಿ ಮಾಡಿಸಿಕೊಡುತ್ತೇವೆ.

ವಿದರ್ಭ ಯೋಜನೆ (ಪ್ರಧಾನಿ ಪ್ಯಾಕೇಜ್)

ಶ್ರೀ ಶಿವರಾಮು ಬಿ. (ಗಂಡಸಿ):–

187(1488) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿದರ್ಭ ಯೋಜನೆ (ಪ್ರಧಾನಿ ಪ್ಯಾಕೇಜ್) ಯಡಿಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಿರುವ ಯೋಜನೆಗಳು ಯಾವುವು; (ಪಟ್ಟಿಯನ್ನು ಒದಗಿಸುವುದು);